<u>ದಿನಾಂಕ:**25-05-2026** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಮಾಡಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು **3** ನೇ ಆರೋಪಿ ಪರ ಶ್ರೀ ಬಿ ಎಂ ಎಲ್ ಜಿ ವಕೀಲರಿಂದ</u>

ಒಂದನೇ ಆರೋಪಿಯ ವಿರುದ್ಧ ಈ ಕೇಸ್ ದಾಖಲಿಸುವ ಪೂರ್ವದಲ್ಲಿ ಅವರ ಪರಿಚಯ ನನಗೆ ಇರಲಿಲ್ಲ. ನನ್ನ, ನನ್ನ ತಂದೆ ಹಾಗೂ ವಿಜಯಕುಮಾರ್ ವಿರುದ್ಧ ಆರ್ ಟಿ ನಗರ ಪೊಲೀಸ್ ಠಾಣೆ ಕ್ರೈ ಸಂಖ್ಯೆ 49/2017 ರಲ್ಲಿ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನಾವು ಆರ್ ಟಿ ನಗರದ ಕಾಫಿ ಡೇಯಲ್ಲಿ ಮಹಮ್ಮದ್ ರಫೀ ಇವರ ಕಡೆಯಿಂದ 40 ಲಕ್ಷ ಹಣವನ್ನು ಜಮೀನು ಖರೀದಿಸುವ ಸಂಬಂಧ ಪಡೆದುಕೊಂಡು ವಾಪಸ್ಸು ಕೊಡದೇ ಇದ್ದ ಬಗ್ಗೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಸಾಕ್ಷಿಯು ಮುಂದುವರಿದು ಆ ಪ್ರಕರಣದ ಬಗ್ಗೆ ನಮಗೆ ವಾರೆಂಟ್ ಆದ ನಂತರ ಗೊತ್ತಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ನಾನು ಮತ್ತು ನನ್ನ ತಂದೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದೇವು ಎಂದರೆ ಸರಿಯಲ್ಲ. 15 ನೇ ಡಿಸೆಂಬರ್ 2015 ರಲ್ಲಿ ನಾವು ಮಹಮ್ಮದ್ ರಫೀ ಯಿಂದ 5 ಲಕ್ಷ ಹಣ ಪಡೆದುಕೊಂಡು ರಿಯಲ್ ಎಸ್ಟೇಟ್ ವ್ಯವಹಾರದಿಂದ ಬಂದ ಲಾಭದಲ್ಲಿ ಲಾಭಂಶ ಕೊಡುತ್ತೇವೆ ಎಂದು ಹಣ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಮಾರ್ಚ 2016 ರಂದು 5 ಲಕ್ಷ ಹಣ ಹಾಗೂ ಅದಕ್ಕೆ ಒಂದು ಲಕ್ಷ ಲಾಭಾಂಶ ಸೇರಿಸಿ ಒಟ್ಟು ಆರು ಲಕ್ಷ ಹಣವನ್ನು ಮಹಮ್ಮದ್ ರಫೀ ಇವರಿಗೆ ನೀಡಿರುತ್ತೇವೆ ಎಂದರೆ ಸರಿಯಲ್ಲ.

2. ಪುನಃ 2 ಮೇ 2015 ರಂದು ಆರ್ ಟಿ ನಗರದ ಕಾಫಿ ಡೇಯಲ್ಲಿ ಪುನಃ 10 ಲಕ್ಷ ಹಣವನ್ನು ನಾವು ಮಹಮ್ಮದ್ ರಫೀ ಯಿಂದ ಹಣವನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಜುಲೈ 2016 ರಲ್ಲಿ ಹತ್ತು ಲಕ್ಷ ಹಾಗೂ ಎರಡು ಲಕ್ಷ ಸೇರಿಸಿ ಒಟ್ಟು 12 ಲಕ್ಷ ಹಣವನ್ನು ಪಾವತಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿ:29-10-2016 ರಂದು ಆರ್ ಟಿ ನಗರದ ಕಾಫಿ ಡೇಯಲ್ಲಿ 40 ಲಕ್ಷ ಹಣವನ್ನು ಮಹಮ್ಮದ್ ರಫೀ ಇವರಿಂದ ರಿಯಲ್ ಎಸ್ಟೇಟ್ ವ್ಯವಹಾರ ಮಾಡುವ ಸಂಬಂಧ ಹಣ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಡಿಸೆಂಬರ್ 2016 ರಂದು ಸದರಿ ಹಣವನ್ನು ಲಾಭಾಂಶ ಸೇರಿಸಿ ವಾಪಸ್ಸು ಮಾಡುತ್ತೇವೆ ಎಂದು ಒಪ್ಪಿಕೊಂಡು ಹಣ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಮಹಮ್ಮದ್ ರಫೀ ಕೇಳಿದಾಗ ನಮಗೂ ಮತ್ತು ಅವರಿಗೆ ಜಗಳವಾಗಿರುತ್ತದೆ ಎಂದರೆ ಸಾಕ್ಷಿಯು ನಾವು ಅವರ ಕಡೆಯಿಂದ ಹಣ ಕೇಳಿರುವುದಿಲ್ಲ ಮತ್ತು ಜಗಳವಾಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

3. ನಮಗೆ ನ.ರಾ.ಪುರದ ಸಾರಿಯಾ ಗ್ರಾಮದಲ್ಲಿ ಜಮೀನುಗಳು ಇರುತ್ತವೆ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸಾರಿಯಾ ಗ್ರಾಮದ ಕೂಸುಕಲ್ಲಿನಲ್ಲಿ ಜಮೀನು ಇರುತ್ತದೆ ಎಂದು ಉತ್ತರಿಸಿರುತ್ತಾರೆ. ಸರ್ವೆ ನಂಬರ್ 16 ರಲ್ಲಿ ನಮಗೆ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿಯು ನಮ್ಮ ತಂದೆಯ ಹೆಸರಿನಲ್ಲಿ ಇರುತ್ತದೆ ಎಂದು ಉತ್ತರಿಸಿರುತ್ತಾರೆ. ನಮ್ಮ ತಂದೆಯ ಹೆಸರಿನಲ್ಲಿ ಸಾರಿಯಾ ಗ್ರಾಮದಲ್ಲಿ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ 8 ¼ ಎಕರೆ ಜಮೀನಿನ ಮೇಲೆ ಸುಮಾರು 60 ಲಕ್ಷ ಸಾಲ ಇರುತ್ತದೆ ಎಂದರೆ ಸಾಕ್ಷಿಯು 15 ಲಕ್ಷ ಕೃಷಿ

ಸಾಲ ಇದ್ದು, ಹಾಗೂ ಒಟ್ಟು ಎಷ್ಟು ಸಾಲ ಇರುತ್ತದೆ ಎಂದು ನನಗೆ ನಿಖರವಾಗಿ ನೆನಪಿರುವುದಿಲ್ಲ. ಸದರಿ ಸಾಲವನ್ನು ನೀವು ಕೆನರಾ ಬ್ಯಾಂಕಿನಲ್ಲಿ ಪಡೆದಿರುತ್ತೀರಿ ಎಂದರೆ ಸಾಕ್ಷಿಯು ನಾವು ಕಾರ್ಪೋರೇಶನ್ ಬ್ಯಾಂಕ್ ನಲ್ಲಿ ಸಾಲ ಮಾಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಪೊಲೀಸರು ತನಿಖೆಯ ಕಾಲಕ್ಕೆ ನಾನು ಕಾರ್ಪೋರೇಶನ್ ಬ್ಯಾಂಕ್ ಅಥವಾ ಇತರೆ ಬ್ಯಾಂಕ್ ನಲ್ಲಿ ಸಾಲ ಇರುವ ಬಗ್ಗೆ ಹೇಳಿದ ಬಗ್ಗೆ ನನಗೆ ನೆನಪಿರುವುದಿಲ್ಲ. ಬ್ಯಾಂಕಿನಲ್ಲಿ ಮಾಡಿದ ಸಾಲ ಇದುವರೆಗೂ ತಿರುವಳಿ ಮಾಡಿರುವುದಿಲ್ಲ ಎಂದರೆ ಸಾಕ್ಷಿಯು ಜಮೀನನ್ನೇ ಮಾರಾಟ ಮಾಡಿರುತ್ತೇವೆ ಎಂದು ಉತ್ತರಿಸಿರುತ್ತಾರೆ. ಗಾಜನೂರಿನಲ್ಲಿ ನಮಗೆ ಕೋಳಿ ಫಾರಂ ಇರುವ ಬಗ್ಗೆ ತನಿಖಾಧಿಕಾರಿಗೆ ಆ ಸಂಬಂಧ ಯಾವುದೇ ದಾಖಲೆಯನ್ನು ಕೊಟ್ಟ ಬಗ್ಗೆ ನನಗೆ ನೆನಪಿರುವುದಿಲ್ಲ.

4. ನಾನು ನ್ಯಾಯಾಲಯದ ಮದ್ಯಂತರ ಆದೇಶದ ಮೇರೆಗೆ 50 ಲಕ್ಷ ಹಣವನ್ನು ಬ್ಯಾಂಕಿನಿಂದ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಲಲಿತಮ್ಮ ಇವರು ಮಾನ್ಯ ಉಚ್ಛ ನ್ಯಾಯಾಲಯದ ಆದೇಶವನ್ನು ಪ್ರಶ್ನೆ ಮಾಡಿ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಎಸ್ ಎಲ್ ಪಿ(ಎಂ) 6101/2026 ರಂತೆ ಮೇಲ್ಮನವಿ ಸಲ್ಲಿಸಿದ್ದು ಅದರಲ್ಲಿ ನನಗೆ ನೋಟಿಸ್ ಬಂದಿರುತ್ತದೆ ಎಂದರೆ ಸರಿ. ಸದರಿ ಪ್ರಕರಣ ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದರೆ ಸರಿ. 2018 ರಲ್ಲಿ ಲಲಿತಮ್ಮ ಇವರ ಸಹೋದರರಾದ ಪರಮೇಶ್ ಮತ್ತು ರಘು ಚಂದ್ರ ಇವರು ಆಸ್ತಿಯನ್ನು ಮಾರಾಟ ಮಾಡಿ ಹಣ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಸದರಿ ಲಲಿತಮ್ಮ ಸಹೋದರರು ಕೆಳಕೂಳಿ ಗ್ರಾಮದ ಸರ್ವೇ ನಂಬರ್ 49/4 , 49/5, 49/6 ಹಾಗೂ 115 ಅಡಿಕೆ ತೋಟ ಮತ್ತು ಫಾರಂ ಹೌಸ್ ಮತ್ತು ಇತರೆ ವಸ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ಸದರಿ ಮಾರಾಟ ಮಾಡಿ ಬಂದ ಹಣದಲ್ಲಿ 70 ಲಕ್ಷ ಹಣವನ್ನು ಲಲಿತಮ್ಮ ಹೆಸರಿನಲ್ಲಿ ಡೆಪಾಸಿಟ್ ಮಾಡಿದ್ದರು ಎಂದರೆ ಸಾಕ್ಷಿಯು ನನಗೆ ಅದರ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನನ್ನ ಕಡೆಯಿಂದ 2016 ರಲ್ಲಿ ರೂ.94,50,000/- ಹಾಗೂ ಇಂತಿಯಾಜ್ ಕಡೆಯಿಂದ 6 ಲಕ್ಷ ಹಣವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿ.

5. ನಂದನ್ ಇವರ ತಂದೆಯ ಹೆಸರು ರಘು ಚಂದ್ರ ಎಂದರೆ ಸರಿ. ಸದರಿ ರಘು ಚಂದ್ರ ಇವರ ಪರಿಚಯ ಇರುತ್ತದೆ. ರಘು ಚಂದ್ರ ಇವರ ಸಹೋದರ ಪರಮೇಶ್ ಇವರ ಪರಿಚಯ ನನಗೆ ಇರುತ್ತದೆ. 2018 ರಲ್ಲಿ ಲಲಿತಮ್ಮ, ಪರಮೇಶ ಮತ್ತು ರಘು ಚಂದ್ರ ಇವರು ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಲಲಿತಮ್ಮನ ಹೆಸರಿಗೆ ಒಂದು ಬಾರಿ ಐವತ್ತು ಲಕ್ಷ ಹಾಗೂ ಇಪ್ಪತ್ತು ಲಕ್ಷ ಒಂದು ಬಾರಿ ಅವರ ಹೆಸರಿನಲ್ಲಿ ಡೆಪಾಸಿಟ್ ಮಾಡಲಾಗಿತ್ತು ಎಂದರೆ ಸಾಕ್ಷಿಯ ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ತೊಂಬತ್ತ ನಾಲ್ಕು ಲಕ್ಷದ ಐವತ್ತು ಸಾವಿರ ಹಣವನ್ನು ಆರೋಪಿತರಿಗೆ ಕೊಟ್ಟಿರುವುದಿಲ್ಲ ಮತ್ತು ನಾನು ಬಿಡಿಸಿಕೊಂಡ ಐವತ್ತು ಲಕ್ಷ ಹಣ ನನಗೆ ಸಂಬಂಧಿಸಿದ್ದು ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಬಳಿ ಅಷ್ಟು ಹಣ ಇದ್ದಿದ್ದರೆ ಜಮೀನಿನ ಮೇಲೆ ಮಾಡಿದ ಸಾಲವನ್ನು ತೀರಿಸುತ್ತಿದ್ದೇವು ಎಂದರೆ ಸಾಕ್ಷಿಯು ನಾವು ಐವತ್ತು ಲಕ್ಷ ಹಣವನ್ನು ಮಂಡಿಯಲ್ಲಿ ಸಾಲ ಮಾಡಿ ಕೊಟ್ಟಿರುತ್ತೇವೆ ಎಂದು ಉತ್ತರಿಸಿರುತ್ತಾರೆ.

6. ಚಂಡಿಕೇಶ್ವರಿ ದೇವಾಲಯದ ಬಳಿ ಪೊಲೀಸರು ಮಹಜರು ಮಾಡಿದ್ದು ಅದರಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಸದರಿ ಜಾಗದ ಚೆಕ್ಕುಬಂಧಿ ದಕ್ಷಿಣಕ್ಕೆ ಸರ್ಕಾರಿ ಕಾಡು, ಪೂರ್ವ ಮತ್ತು ಪಶ್ಚಿಮಕ್ಕೆ ಹಂತೋನಿಯಿಂದ ಹೊನ್ನೆಕೂಡಿಗೆಗೆ ಹೋಗುವ ರಸ್ತೆ ಮತ್ತು ಉತ್ತರಕ್ಕೆ ಚಂಡಿಕೇಶ್ವರಿ ದೇವಾಲಯ ಇರುತ್ತದೆ ಎಂದರೆ ಸರಿ. ಪಂಚನಾಮೆಯನ್ನು ಬರೆಯಲು ನಾನು ವಿಚಾರಗಳನ್ನು ತಿಳಿಸಿರುವುದಿಲ್ಲ ಆದರೆ ಘಟನೆಯ ಬಗ್ಗೆ ಪೊಲೀಸರಿಗೆ ತಿಳಿಸಿರುತ್ತೇನೆ. ನನಗೆ ಚಾಸಾ-3 ಮತ್ತು 4 ರವರ ಪರಿಚಯ ಇರುವುದಿಲ್ಲ. ಸದರಿಯವರನ್ನು ಪೊಲೀಸರು ಆ ದಿನ ಕರೆಸಿರುತ್ತಾರೆ. ಹಾಲಂದೂರು ಮತ್ತು ಶೆಟ್ಟಿಕೊಪ್ಪ ಗ್ರಾಮ ಚಂಡಿಕೇಶ್ವರಿ ದೇವಾಲಯಕ್ಕೆ ಎಷ್ಟು ದೂರ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಚಾಸಾ-3 ಮತ್ತು 4 ರವರು ನನ್ನ ಸ್ನೇಹಿತರೆಂದು ನಾನೇ ಆ ದಿನ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಮಹಜರಿಗೆ (ನಿಪಿ-2) ಎನ್ ಆರ್ ಪುರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-2 ನ್ನು ಪೊಲೀಸರು ಬರೆದಿದ್ದು, ಅವರ ಹೆಸರು ನನಗೆ ನೆನಪಿರುವುದಿಲ್ಲ. ನಿಪಿ-2 ಅನ್ನು ಮಾಡುವ ಕಾಲಕ್ಕೆ ಭಾವಚಿತ್ರ ತೆಗೆದಿದ್ದು ಅದನ್ನು ಯಾವ ಪೊಲೀಸರು ತೆಗೆದಿರುತ್ತಾರೆ ಎಂದು ನನಗೆ ನೆನಪಿರುವುದಿಲ್ಲ. ದಿ:25-03-2017 ರಂದು ನಿಪಿ-2 ಪಂಚನಾಮೆಯನ್ನು ಮಾಡಿರುತ್ತಾರೆ. ದಿ:30-04-2017 ರಂದು ಸದ್ಗುರು ಸೇವಾಶ್ರಮ ಹೊಸದುರ್ಗ ದಲ್ಲಿ ಪಂಚನಾಮೆ ಮಹಜರು ಮಾಡಲಾಗಿರುತ್ತದೆ. ಸದರಿ ನಿಪಿ-4 ಅನ್ನು ಮಹಜರು ಮಾಡುವ ಕಾಲಕ್ಕೆ ಚಾಸಾ-17 ಮತ್ತು 18 ರವರು ಹಾಜರಿದ್ದರು. ಚಾಸಾ-17 ಮತ್ತು 18 ರವರನ್ನು ಪೊಲೀಸರು ಕರೆದುಕೊಂಡು ಬಂದಿದ್ದು ಅವರ ಹೆಸರು ಹೇಳಲು ಆಗುವುದಿಲ್ಲ. ನಿಪಿ-4 ಪಂಚನಾಮೆಯನ್ನು ಮದ್ಯಾಹ್ನ 1.00 ಗಂಟೆಯಿಂದ 1.30 ರವರೆಗೆ ಬರೆಯಲಾಗಿರುತ್ತದೆ. ಪಂಚನಾಮೆಯನ್ನು ಬರೆದ ಪೊಲೀಸರ ಹೆಸರು ನನಗೆ ಗೊತ್ತಿರುವುದಿಲ್ಲ. ಚಾಸಾ-17 ಮತ್ತು 18 ರವರು ಯಾವ ಊರಿನವರು ಎಂಬ ಬಗ್ಗೆ ನನಗೆ ಗೊತ್ತಿರುವುದಿಲ್ಲ.

7. ಸದ್ಗುರು ಸೇವಾಶ್ರಮ ಹೊಸದುರ್ಗ ದಲ್ಲಿ ಸಣ್ಣ ಗುರುಗಳನ್ನು ಬಿಟ್ಟು ಅಲ್ಲಿ ಅವರ ಶಿಷ್ಯಂದಿರು ಮತ್ತು ಸೇವಕರು ಇದ್ದರು ಎಂದರೆ ಸಾಕ್ಷಿಯು ಸಣ್ಣ ಗುರುಗಳು ಮಾತ್ರ ಇದ್ದರು ಎಂದು ಉತ್ತರಿಸಿರುತ್ತಾರೆ. ನಿಪಿ-4 ಒಕ್ಕಣೆ ಬರೆಯಲು ನಾನು ಘಟನೆಯ ಬಗ್ಗೆ ಪೊಲೀಸರಿಗೆ ಹೇಳಿರುತ್ತೇನೆ. ನಿಪಿ-4 ರ ಉತ್ತರ ಭಾಗಕ್ಕೆ ಗಣಪತಿ ದೇವಾಲಯ, ಪೂರ್ವ ಪಶ್ಚಿಮಕ್ಕೆ ಸದ್ಗುರು ಸೇವಾಶ್ರಮದ ಆವರಣ ಹಾಗೂ ದಕ್ಷಿಣಕ್ಕೂ ಸಹ ಸದ್ಗುರು ಸೇವಾಶ್ರಮದ ಆವರಣವಿರುತ್ತದೆ.ನಿಪಿ-4 ಅನ್ನು ಮಾಡುವ ಕಾಲಕ್ಕೆ ಸದ್ಗುರು ಸೇವಾಶ್ರಮ ಸಣ್ಣ ಸ್ವಾಮೀಜಿಯನ್ನು ಪೊಲೀಸರು ವಿಚಾರಣೆ ಮಾಡಿರುವುದಿಲ್ಲ. ನಿಪಿ-5 ಭಾವಚಿತ್ರವನ್ನು ಯಾವುದರ ಮೂಲಕ ತೆಗೆದಿರುತ್ತಾರೆ ಎಂದರೆ ಸಾಕ್ಷಿಯು ಮೊದಲು ನೆನಪಿಲ್ಲ ಎಂದಿದ್ದು, ನಂತರ ಫೋನಿನ ಮುಖಾಂತರ ತೆರೆದಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ಸದರಿ ಫೋನ್ ಯಾರದ್ದು ಮತ್ತು ಅದರ ನಂಬರ್ ನನಗೆ ಹೇಳಲು ಆಗುವುದಿಲ್ಲ. ಅದೇ ದಿನ ರಾಮ್ಕೋ ಸಿಮೆಂಟ್ ಲಿಮಿಟೆಡ್ ಬಳಿ ನನಗೆ ಹಲ್ಲೆ ಮಾಡಿದ ಜಾಗ ಎಂದು ಪೊಲೀಸರಿಗೆ ತೋರಿಸಿರುತ್ತೇನೆ. ಸದರಿ ಸ್ಥಳದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ. ನಿಪಿ-6 ರಲ್ಲಿ ಒಕ್ಕಣೆಯನ್ನು ಬರೆಯಲು ನೀವು ಹೇಳಿದ್ದುಂಟ ಎಂದರೆ

ಸಾಕ್ಷಿಯು ನನಗೆ ಹಲ್ಲೆ ಮಾಡಿದ ಬಗ್ಗೆ ಪೊಲೀಸರಿಗೆ ಹೇಳಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಿಪಿ-6 ಅನ್ನು ಮಾಡುವ ಕಾಲಕ್ಕೆ ಸದರಿ ರಾಮ್ಕೋ ಸಿಮೆಂಟ್ ಲಿಮಿಟೆಡ್ ನ ಸಿಬ್ಬಂಧಿಗಳಾಗಲೀ ಅಥವಾ ಕಾರ್ಮಿಕರಾಗಲೀ ಹಾಗೂ ಮೇಲ್ವಿಚಾರಕರು ಇರಲಿಲ್ಲ ಎಂದರೆ ಸರಿ. ಪೊಲೀಸರು ನಿಪಿ-6 ಅನ್ನು ಮಾಡುವ ಕಾಲಕ್ಕೆ ಸದರಿ ಜಾಗದ ಅಕ್ಕ ಪಕ್ಕದವರನ್ನು ವಿಚಾರಣೆ ಮಾಡಿರುವುದಿಲ್ಲ. ನಿಪಿ-6 ಪಂಚನಾಮೆಗೆ ಚಾಸಾ-17 ಮತ್ತು 18 ರವರು ಪಂಚ ಸಾಕ್ಷಿದಾರರು ಇರುತ್ತಾರೆ.

8. ನಿಪಿ-4 ಮತ್ತು 6 ದಾಖಲೆಗಳಿಗೆ ನಾನು ಪೊಲೀಸ್ ಠಾಣೆಯಲ್ಲಿ ರುಜು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-7 ರಲ್ಲಿ ರಾಮ್ಕೋ ಸಿಮೆಂಟ್ ಲಿಮಿಟೆಡ್ ಗೆ ಹೋಗುವ ರಸ್ತೆಯ ಭಾವಚಿತ್ರ ಇರುತ್ತದೆ ಎಂದರೆ ಸರಿ. ಪಂಚನಾಮೆ ಮಾಡುವ ಕಾಲಕ್ಕೆ ರಾಮ್ಕೋ ಸಿಮೆಂಟ್ ಲಿಮಿಟೆಡ್ ಕಂಪನಿಯು ಬಂದ್ ಆಗಿರುವ ಬಗ್ಗೆ ಯಾವುದೇ ಬರವಣಿಗೆ ಇರುವುದಿಲ್ಲ ಎಂದರೆ ಸಾಕ್ಷಿಯು ನನಗೆ ಆ ಬಗ್ಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ದಿಃ19-04-2018 ರ ಮಹಜರಿನಲ್ಲಿ ಬರೆದ ವಿಚಾರಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಪಿ-9 ಅನ್ನು ಮಾಡುವ ಕಾಲಕ್ಕೆ ಯಾವುದಾದರೂ ವಸ್ತುಗಳನ್ನು ವಶಪಡಿಸಿಕೊಂಡ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ-9 ಅನ್ನು ಮಾಡುವ ಕಾಲಕ್ಕೆ ಸದರಿ ಹೋಟೇಲ್ ನ ಸೆಕ್ಯೂರಿಟಿಯನ್ನಾಗಲೀ ಅಥವಾ ಸಿಬ್ಬಂಧಿಯವರನ್ನಾಗಲೀ ಪೋಲಿಸರು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಿಪಿ-9 ಅನ್ನು ಮಾಡುವ ಕಾಲಕ್ಕೆ ಸದರಿ ಹೊಟೇಲ್ ನಿಂದ ಕಾಗದ ಪತ್ರವನ್ನಾಗಲೀ ಅಥವಾ ಸಿಡಿಯನ್ನಾಗಲೀ ವಶಪಡಿಸಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-9 ಅನ್ನು ಮಾಡುವ ಕಾಲಕ್ಕೆ ಪಂಚ ಸಾಕ್ಷಿದಾರರನ್ನು ನಾವೇ ಕರೆದುಕೊಂಡು ಹೋಗಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಪೊಲೀಸರೇ ಕರೆದುಕೊಂಡು ಬಂದಿದ್ದರು ಎಂದು ಉತ್ತರಿಸಿರುತ್ತಾರೆ. ನಿಪಿ-9 ಹೋಟೇಲ್ ನ ಚೆಕ್ಕುಬಂಧಿ ಸುತ್ತಲೂ ಹೊಟೇಲ್ ಗೆ ಸಂಬಂದಿಸಿದ ಆವರಣ ಮತ್ತು ಹೊಟೇಲ್ ರೂಮುಗಳು ಇರುತ್ತವೆ. ಸದರಿ ಹೋಟೇಲ್ ನ ಮಾಲೀಕರ ಬಗ್ಗೆ ಮತ್ತು ಉದ್ಯೋಗ ಬಗ್ಗೆ ಪೊಲೀಸರು ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಹೊಟೇಲ್ ಗೆ ಹೋಗುವ ಪೂರ್ವದಲ್ಲಿ ಸದರಿ ಹೋಟೇಲ್ ನ ಮೇಲ್ವಿಚಾರಕರ ಅನುಮತಿ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿರುವುದಿಲ್ಲ.

9. ನಿಪಿ-9 ಅನ್ನು ಮದ್ಯಾಹ್ನ 1.30 ರಿಂದ 2.00 ಗಂಟೆ ಅವಧಿಯಲ್ಲಿ ಮಾಡಲಾಗಿರುತ್ತದೆ. ನಿಪಿ-10 ಅನ್ನು ಪೋಲಿಸರು ಯಾವ ಮುಖಾಂತರ ತೆಗೆದಿರುತ್ತಾರೆ ಎಂದು ನನಗೆ ಈಗ ನೆನಪಿರುವುದಿಲ್ಲ, ಆದರೆ ಪೊಲೀಸರು ತೆಗೆದಿರುತ್ತಾರೆ. ನಿಪಿ-11 ಪಂಚನಾಮೆ ಮಾಡುವ ಕಾಲಕ್ಕೆ ನಾನೇ ಪಂಚರನ್ನು ಕರೆದುಕೊಂಡು ಹೋಗಿದ್ದೆ ಎಂದರೆ ಸರಿಯಲ್ಲ. ಚಾಸಾ-19 ಮತ್ತು 20 ರವರು ನನ್ನ ಸ್ನೇಹಿತರು ಮತ್ತು ಸಂಬಂಧಿಕರು ಇರುತ್ತಾರೆ ಎಂದರೆ ಸರಿಯಲ್ಲ. ನಿಪಿ-11 ಅನ್ನು ಮಾಡುವ ಕಾಲಕ್ಕೆ ಯಾವುದಾದರೂ ವಸ್ತುಗಳನ್ನು ವಶಪಡಿಸಿಕೊಂಡ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ-11 ಅನ್ನು ಮಾಡುವ ಕಾಲಕ್ಕೆ ಸದರಿ ಹೋಟೇಲ್ ನ ಸೆಕ್ಯೂರಿಟಿಯನ್ನಾಗಲೀ ಅಥವಾ ಸಿಬ್ಬಂಧಿಯವರನ್ನಾಗಲೀ ಪೋಲಿಸರು ವಿಚಾರಣೆ ಮಾಡಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. ನಿಪಿ-11 ಅನ್ನು ಮಾಡುವ ಕಾಲಕ್ಕೆ ಸದರಿ ಹೊಟೇಲ್ ನಿಂದ ಕಾಗದ

ಪತ್ರವನ್ನಾಗಲೀ ಅಥವಾ ಸಿಡಿಯನ್ನಾಗಲೀ ವಶಪಡಿಸಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-11 ಅನ್ನು ಮಾಡುವ ಕಾಲಕ್ಕೆ ಪಂಚ ಸಾಕ್ಷಿದಾರರನ್ನು ನಾವೇ ಕರೆದುಕೊಂಡು ಹೋಗಿದ್ದೇವು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಪೊಲೀಸರೇ ಕರೆದುಕೊಂಡು ಬಂದಿದ್ದರು ಎಂದು ಉತ್ತರಿಸಿರುತ್ತಾರೆ. ನಿಪಿ-11 ಹೋಟೇಲ್ ನ ಚೆಕ್ಕುಬಂಧಿ ಸುತ್ತಲೂ ಹೊಟೇಲ್ ಗೆ ಸಂಬಂದಿಸಿದ ಆವರಣ ಮತ್ತು ಹೊಟೇಲ್ ರೂಮುಗಳು ಇರುತ್ತವೆ. ಸದರಿ ಹೋಟೇಲ್ ನ ಮಾಲೀಕರ ಬಗ್ಗೆ ಮತ್ತು ಉದ್ದಳತೆಯ ಬಗ್ಗೆ ಪೊಲೀಸರು ಮಾಹಿತಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ಹೊಟೇಲ್ ಗೆ ಹೋಗುವ ಪೂರ್ವದಲ್ಲಿ ಸದರಿ ಹೋಟೇಲ್ ನ ಮೇಲ್ವಿಚಾರಕರ ಅನುಮತಿ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಿಪಿ-12 ಅನ್ನು ಯಾರು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ.

10. ದಿಃ08-01-2019 ರಂದು ನಾನು ಒಂದು ಸಿಡಿಯನ್ನು ಹಾಜರುಪಡಿಸಿದ್ದು ಅದನ್ನು ದೂರು ಕೊಡುವ ಕಾಲಕ್ಕೆ ಮತ್ತು ಮರುಹೇಳಿಕೆ ಕೊಡುವ ಕಾಲಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಾನು ಮತ್ತು ಪೊಲೀಸರು ಸೇರಿಕೊಂಡು ನಿಪಿ-14 ಮತ್ತು 15 ತಯಾರಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-2,4, 6, 9,11 ಮತ್ತು 13 ಕ್ಕೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಲಲಿತ್ ಅಶೋಕ ಹೊಟೇಲ್ ಗೆ ಹೋದ ಬಗ್ಗೆ ಮತ್ತು ಅಲ್ಲಿ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಹೊಟೇಲ್ ನ ಲಾಡ್ಜ ನ ಬುಕ್ ಗೆ ಸಹಿ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಿವಿಧ ದಿನಾಂಕಗಳಂದು ಆರೋಪಿಗೆ ಹಣ ಕೊಟ್ಟಿರುತ್ತೇನೆ ಮತ್ತು ಸಾಲ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿಃ19-12-2016 ರಂದು ನಾನು ಮತ್ತು ನನ್ನ ತಂದೆ ಹಣ ಕೊಡಲು ಬೆಂಗಳೂರಿಗೆ ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆರೋಪಿತರಿಗೆ ಬ್ಲಾಕ್ ಮೇಲ್ ಮಾಡುವ ಸಂಬಂಧ ಈ ರೀತಿ ಸುಳ್ಳು ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ದೂರು ಕೊಡುವ ಕಾಲಕ್ಕೆ ಪೋನ್ ನಂಬರ್ ನೀಡಿದ್ದು, ಅದು ಯಾರದು ಎಂಬ ಬಗ್ಗೆ ನಾನು ಯಾವುದೇ ದಾಖಲೆ ಪಡೆದುಕೊಳ್ಳದೇ ಪ್ರಯತ್ನ ಪಟ್ಟಿಲ್ಲ ಎಂದರೆ ಸರಿ.

11. ದಿಃ26.03.2017 ರಂದು ಕಾರ್ಪೋರೇಶನ್ ಬ್ಯಾಂಕ್ ಹತ್ತಿರ ರಾಜೇಶ್ ಇವರು ದೂರು ಕೊಡುವುದು ಬೇಡ, ರಾಜಿ ಮಾಡಿಕೊಳ್ಳೋಣ ಎಂದು ಹೇಳಿದ್ದರು ಎಂಬ ವಿಚಾರವನ್ನು ನಾನು ನನ್ನ ದೂರಿನಲ್ಲಿ ಅಥವಾ ಮುಂದುವರೆದ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸಾಕ್ಷಿಯು ನನ್ನ ಮರುಹೇಳಿಕೆಯಲ್ಲಿ ಹೇಳಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ರಾಜೇಶ್ ಎನ್ನುವವರು ದೊಡ್ಡ ಸ್ವಾಮೀಜಿ ಎಂದು ನಾನೇ ಬಿಂಬಿಸಿರುತ್ತೇನೆ ಎಂದರೆ ಸರಿಯಲ್ಲ. ರೈಸ್ ಪುಲ್ ವ್ಯವಹಾರ ಮಾಡುವ ಕಾಲಕ್ಕೆ ಸಣ್ಣ ಸ್ವಾಮೀಜಿಯವರು ನಿಮಗೆ ಅಪ್ಪಣೆಯಾಗಿದೆ ಮತ್ತು ಸದರಿ ವಸ್ತುವನ್ನು ಪರೀಕ್ಷೆ ಮಾಡಿರುವುದಾಗಿ ಹೇಳಿರುತ್ತಾರೆ ಎಂದರೆ ಸಾಕ್ಷಿಯು ಬರೀ ಅಪ್ಪಣೆಯಾದ ಬಗ್ಗೆ ಹೇಳಿದ್ದು ವಸ್ತುವನ್ನು ಪರೀಕ್ಷೆ ಮಾಡಲು ಕಂಪನಿಯವರು ಬರುತ್ತಾರೆ ಎಂದು ಹೇಳಿದ್ದರು ಎಂದು ಉತ್ತರಿಸಿರುತ್ತಾರೆ. ಸದರಿ ಘಟನೆಯು ಸದ್ಗುರು ಸೇವಾಶ್ರಮ ಮತ್ತು ಬೆಂಗಳೂರಿನಲ್ಲಿ ನಡೆದಿರುತ್ತದೆ ಎಂದರೆ ಸಾಕ್ಷಿಯು ನ.ರಾ.ಪುರದ ಜಮೀನಿನ ಬಳಿ, ಬಸ್ತಿ ಮಠ, ಚಂಡಿಕೇಶ್ವರಿ ದೇವಾಲಯ,

ಹೊಸದುರ್ಗ ಹಾಗೂ ಬೆಂಗಳೂರಿನಲ್ಲಿ ವ್ಯವಹಾರ ವಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ನ.ರಾ.ಪುರದ ಜಮೀನಿನ ಬಳಿ, ಬಸ್ತಿ ಮಠ, ಚಂಡಿಕೇಶ್ವರಿ ದೇವಾಲಯದ ಬಳಿ ಯಾವುದೇ ವ್ಯವಹಾರ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಹಲ್ಲೆ ಮಾಡಿರುತ್ತಾರೆ ಎಂಬ ಬಗ್ಗೆ ನಾನು ಯಾವುದೇ ಚಿಕಿತ್ಸೆ ಪಡೆದುಕೊಂಡಿರುವುದಿಲ್ಲ. ಸಾಕ್ಷಿಯು ಮುಂದುವರಿದು ನಾನು ಡಿಪ್ರೆಷನ್ ಗೆ ಹೋಗಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ನಾನು ಖಿನ್ನತೆಗೆ ಹೋದ ಬಗ್ಗೆ ದೂರು, ಮರು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ನನಗೆ ಇಲ್ಲಿಯವರೆಗೂ ಸಣ್ಣ ಸ್ವಾಮೀಜಿ ಯಾರು ಎಂದು ತಿಳಿದು ಬಂದಿಲ್ಲ ಎಂದರೆ ಸಾಕ್ಷಿಯು ಪೊಲೀಸರು ಹೇಳಿದ ಮೇರೆಗೆ ಅವರ ಹೆಸರು ಕೃಷ್ಣಪ್ಪ ಎಂದು ಗೊತ್ತಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ನನಗೆ ಮತ್ತು ಪೊಲೀಸರಿಗೆ ಸಣ್ಣ ಸ್ವಾಮೀಜಿ ಮತ್ತು ದೊಡ್ಡ ಸ್ವಾಮೀಜಿಯ ಬಗ್ಗೆ ಗೊತ್ತಿದ್ದರೂ ಸಹ ಅವರನ್ನು ಬಚಾವು ಮಾಡುವ ಸಲುವಾಗಿ ಆರೋಪಿತರ ವಿರುದ್ದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

12. ನಿಪಿ-14 ಮತ್ತು 15 ರಲ್ಲಿ ನಿಜವಾದ ವಿಚಾರ ಇರುವುದಿಲ್ಲ ಅದನ್ನು ನಾವು ಈ ಕೇಸಿಗೋಸ್ಕರ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಮಹಮ್ಮದ್ ರಫೀ ಇವರು ನಾನು ದೂರು ಕೊಡುವ ಪೂರ್ವದಲ್ಲೇ ದೂರು ಕೊಟ್ಟಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನಾನು ಸಾಕ್ಷ್ಯ ನುಡಿದಿರುವುದು ಅಂದಾಜಿನ ಮೇಲೆ ಇದ್ದು ಆ ರೀತಿ ಯಾವುದೇ ಘಟನೆ ನಡೆದಿರುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ **1,2,** ಮತ್ತು **4** ರ ಪರ ವಕೀಲರು ಆರೋಪಿ **3** ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

ಪಾಟೀ ಸವಾಲು ಃ ಆರೋಪಿ **3** ರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಆರೋಪಿ **5** ರವರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

<u>ಮರು ವಿಚಾರಣೆ ಃ ಇಲ್ಲ ಃಃ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸ ಇ ಎ ಒ

sd/-xx

ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ